## ನಿಮ್ಮೊಡನೆ

# ಅಪಘಾತಗಳು ಕಡಿಮೆಯಾಗಲಿ

ಭಾರೀ ಪ್ರಮಾಣದ ದಂಡದ ಭಯದಿಂದಲಾದರೂ ಜನರು ರಸ್ತೆ ಸುರಕ್ಷತಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬಹುದು ಎನ್ನುವುದು ಸರಕಾರದ ಆಶಯವಾಗಿದೆ. ಆದರೆ ಈ ನಿಯಮಗಳನ್ನು ಅಧಿಕಾರಿಗಳು ಎಷ್ಟು ನಿಷ್ಠೆಯಿಂದ ಜಾರಿಗೆ ತರುತ್ತಾರೆ ಎನ್ನುವುದು ಗಮನಿಸಬೇಕಾದ ಅಂಶ.

ರಸ್ತೆ ಅಪಘಾತದ ಸಾವುಗಳಲ್ಲಿ ನಮ್ಮ ದೇಶ ವಿಶ್ವಕ್ಕೇ ಮೊದಲ ಸ್ಥಾನ ಗಳಿಸಿದೆ ಎನ್ನುವುದು ಈಗಾಗಲೆ ಜಗಜ್ಜಾಹೀರಾಗಿದೆ. ಕಳೆದ ವರ್ಷ ಬಿಡುಗಡೆಯಾದ ಅಂಕಿ ಅಂಶಗಳ ಪ್ರಕಾರ, 2015ರಲ್ಲಿ 1,46,133 ಜನರು ರಸ್ತೆ ಅಪಘಾತಗಳಲ್ಲಿ ಮೃತಪಟ್ಟಿದ್ದಾರೆ. ಸರಕಾರವೇ ಹೇಳುವ ಪ್ರಕಾರ, ಭಾರತದಲ್ಲಿ ಪ್ರತಿದಿನ 400ಕ್ಕೂ ಹೆಚ್ಚು ಜನರು ರಸ್ತೆ ಅಪಘಾತಗಳಲ್ಲಿ ಸಾವನ್ನಪ್ಪುತ್ತಾರೆ. ಈ ಸಾವುಗಳನ್ನು ತಪ್ಪಿಸಲು ಸಾಧ್ಯವಿತ್ತೆ? ನಮ್ಮ ರಸ್ತೆಗಳು ಅಷ್ಟೊಂದು ಅಸುರಕ್ಷಿತವೆ? ನಮ್ಮ ರಸ್ತೆ ಸುರಕ್ಷತೆಯ ನಿಯಮಗಳು ಸರಿ ಇಲ್ಲವೆ? ಅಥವಾ ನಮಗೆ ರಸ್ತೆ ನಿಯಮಗಳ ಬಗ್ಗೆ ತೀವ್ರ ಅಸಡ್ಡೆಯೆ? ನಿಯಮಗಳನ್ನು ಜಾರಿಗೊಳಿಸಬೇಕಾದ ಅಧಿಕಾರಿಗಳಲ್ಲಿ ಕರ್ತವ್ಯನಿಷ್ಠೆ ಇಲ್ಲವೆ?

ಮೇಲಿನ ಎಲ್ಲ ಪ್ರಶ್ನೆಗಳಿಗೂ ಉತ್ತರ 'ಹೌದು' ಎಂದೇ ಆಗಿದೆ! ರಸ್ತೆ ಅಪಘಾತಗಳ ವಿಶ್ಲೇಷಣೆ ನಡೆಸಿದರೆ ನಮ್ಮಲ್ಲಿ ರಸ್ತೆ ಸುರಕ್ಷತೆಗೆ ಸಂಬಂಧಿಸಿ ಸಮಗ್ರ ಕಾನೂನುಗಳ ಜಾರಿ ಸಾಧ್ಯವಾಗಿಲ್ಲ ಎನ್ನುವುದು ಸ್ಪಷ್ಟ. ಹಾಗೆಂದೇ ಕಳೆದ ವಾರ ಲೋಕಸಭೆಯಲ್ಲಿ 1988ರ ಮೋಟಾರ್ ವಾಹನಗಳ ತಿದ್ದುಪಡಿ ಕಾಯ್ದೆಗೆ ಅಂಗೀಕಾರ ದೊರಕಿದೆ. ಇನ್ನೀಗ ಈ ಮಸೂದೆ ರಾಜ್ಯಸಭೆಯಲ್ಲೂ ಚರ್ಚೆಯಾಗಿ ಅಂಗೀಕಾರ ಪಡೆಯಬೇಕಿದೆ. ಕಳೆದ 2–3 ವರ್ಷಗಳಿಂದ ರಸ್ತೆ ಸುರಕ್ಷತೆಯ ನಿಯಮಗಳ ಬಗ್ಗೆ, ತಿದ್ದುಪಡಿ ಮಸೂದೆಯ ಹೊಸ ನಿಯಮಗಳ ಬಗ್ಗೆ ಸಾರ್ವಜನಿಕ ಚರ್ಚೆ ನಡೆದಿದೆ. ಚರ್ಚೆಯಲ್ಲಿ ಹೊರಹೊಮ್ಮಿದ ಬಹುತೇಕ ಅಂಶಗಳನ್ನು ಮಸೂದೆಯಲ್ಲಿ ಅಳವಡಿಸಿಕೊಳ್ಳಲಾಗಿದೆ. ತಿದ್ದುಪಡಿ ಮಸೂದೆಗೆ ಕೊನೆಗೂ ಲೋಕಸಭೆಯ ಸಮ್ಮತಿ ಸಿಕ್ಕಿರುವುದು ಸ್ವಾಗತಾರ್ಹ ಸಂಗತಿ.

ಮೋಟಾರು ವಾಹನಗಳ ಕಾಯ್ದೆಯ ಈ ತಿದ್ದುಪಡಿ ಮಸೂದೆ, ಕಾಯ್ದೆಯ ಬಹುತೇಕ ದುರ್ಬಲ ಅಂಶಗಳ ಕಡೆಗೆ ಗಮನ ಹರಿಸಿದೆ. ಒಂದರ್ಥದಲ್ಲಿ ಇದು ಸಮಗ್ರ ಮಸೂದೆಯೇ ಸರಿ. ರಸ್ತೆಯ ನಿಯಮಗಳು, ಚಾಲಕರ ನಡವಳಿಕೆ, ವಾಹನಗಳ ನೋಂದಣಿ, ನವೀಕರಣ, ವಿಮೆಯ ಪರಿಹಾರ ಮುಂತಾಗಿ ಎಲ್ಲ ಮಗ್ಗುಲುಗಳಲ್ಲೂ ಕಾಯ್ದೆಗೆ ಹೊಸ ಸ್ಪರ್ಶ ನೀಡಲಾಗಿದೆ. ಕೇಂದ್ರ ಸರಕಾರ ರೂಪಿಸಿರುವ ಕಾಯ್ದೆ ಇದಾದರೂ, ಇದರ ಬಹುತೇಕ ಅಂಶಗಳನ್ನು ಜಾರಿಗೆ ತರುವ ಹೊಣೆಗಾರಿಕೆ ರಾಜ್ಯ ಸರಕಾರಗಳದ್ದು. ರಸ್ತೆ ನಿಯಮಗಳ ಉಲ್ಲಂಘನೆಗೆ ವಿಧಿಸುವ ದಂಡದ ಪ್ರಮಾಣವನ್ನು ಸಾಕಷ್ಟು ಹೆಚ್ಚಿಸಿರುವುದು ಹೊಸ ಕಾಯ್ದೆಯಲ್ಲಿ ಗಮನಾರ್ಹ ಅಂಶ. ಭಾರೀ ಪ್ರಮಾಣದ ದಂಡದ ಭಯದಿಂದಲಾದರೂ ಜನರು ರಸ್ತೆ ಸುರಕ್ಷತಾ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬಹುದು ಎನ್ನುವುದು ಸರಕಾರದ ಆಶಯವಾಗಿದೆ. ಆದರೆ ಈ ನಿಯಮಗಳನ್ನು ಅಧಿಕಾರಿಗಳು ಎಷ್ಟು ನಿಷ್ಠೆಯಿಂದ ಜಾರಿಗೆ ತರುತ್ತಾರೆ ಎನ್ನುವುದು ಗಮನಿಸಬೇಕಾದ ಅಂಶ. ಸಾರಿಗೆ ಇಲಾಖೆಯಲ್ಲಿ ಹಿಂದಿನಿಂದಲೂ ಭ್ರಷ್ಟಾಚಾರ ಎಷ್ಟರ ಮಟ್ಟಿಗೆ ಹಾಸುಹೊಕ್ಕಾಗಿದೆ ಎನ್ನುವುದು ಎಲ್ಲರಿಗೂ ಗೊತ್ತಿರುವ ಸಂಗತಿಯೇ. ಹೊಸ ಕಾಯ್ದೆಯ ನಿಯಮಗಳನ್ನು ಅಧಿಕಾರಿಗಳು ಕಟ್ಟುನಿಟ್ಟಾಗಿ ಜಾರಿಗೆ ತಂದರೆ ಮಾತ್ರ ಅಪಘಾತಗಳ ಸಂಖ್ಯೆ ಸಾಕಷ್ಟು ಕಡಿಮೆಯಾಗಬಹುದು.

ರಸ್ತೆ ಅಪಘಾತಗಳಿಗೆ ಆ ರಸ್ತೆ ನಿರ್ಮಿಸಿದ ಕಂಟ್ರಾಕ್ಟರರನ್ನೂ ಹೊಣೆ ಮಾಡುವ ಕುರಿತು ಹೊಸ ಕಾಯ್ದೆಯಲ್ಲಿ ಉಲ್ಲೇಖಗಳಿವೆ. ಜತೆಗೆ ವಾಹನಗಳ ನೋಂದಣಿ, ಚಾಲಕರ ಲೈಸೆನ್ಸ್ ನೀಡಿಕೆ, ದಂಡ ವಸೂಲಿ ಮುಂತಾಗಿ ಎಲ್ಲ ಕಚೇರಿ ಕೆಲಸಗಳನ್ನೂ ಪೂರ್ಣವಾಗಿ ಆನ್‌ಲೈನ್ ಮೂಲಕ ಮಾಡಲು ನಿರ್ಧರಿಸಲಾಗಿದೆ. ಹೊಸ ತಂತ್ರಜ್ಞಾನದ ಸಂಪೂರ್ಣ ಬಳಕೆಯಿಂದ ನಿಯಮಗಳ ಸುರಕ್ಷಿತ ಅನುಷ್ಠಾನ ಸುಲಭವಾಗಲಿದೆ. ಭ್ರಷ್ಟಾಚಾರಕ್ಕೂ ಬಹುತೇಕ ಕಡಿವಾಣ ಹಾಕಬಹುದು. ಹೆದ್ದಾರಿಗಳಲ್ಲಿ ಎಲೆಕ್ಟ್ರಾನಿಕ್ ಮೇಲುಸ್ತುವಾರಿ ವಾಹನ ಚಾಲನೆಯನ್ನು ಇನ್ನಷ್ಟು ಗ್ರಾಹಕ ಸ್ನೇಹಿಯಾಗಿಸಲಿದೆ. ನಿಯಮಗಳ ಉಲ್ಲಂಘನೆಯನ್ನು ತಕ್ಷಣ ಪತ್ತೆ ಹಚ್ಚಿ ದಂಡವಸೂಲಿಯನ್ನೂ ಸ್ವಯಂಚಾಲಿತವಾಗಿ ಮಾಡಬಹುದು. ಹೆದ್ದಾರಿಯ ಪಕ್ಕದಲ್ಲಿರುವ ವೈನ್‌ಸ್ಟೋರ್‌ಗಳನ್ನು ಮುಚ್ಚಿಸುವಲ್ಲಿ ಸುಪ್ರೀಂಕೋರ್ಟಿನ ಇತ್ತೀಚಿನ ತೀರ್ಪು ಮಹತ್ವದ ಪಾತ್ರ ವಹಿಸಿದೆ. ಬಹುತೇಕ ಅಪಘಾತಗಳಿಗೆ ಕುಡಿದು ಚಾಲನೆ ನಡೆಸುವುದೇ ಕಾರಣವಾಗಿರುವುದರಿಂದ ಈ ನಿಟ್ಟಿನಲ್ಲಿ ಕಠಿಣ ಕ್ರಮಗಳನ್ನು ಕೈಗೊಳ್ಳದೆ ನಿರ್ವಾಹವಿಲ್ಲ. ಹೊಸ ಮಸೂದೆ ರಾಜ್ಯಸಭೆಯಲ್ಲೂ ಶೀಘ್ರ ಅನುಮೋದನೆ ಪಡೆಯಲಿ. ವಾಹನಗಳ ವಿಮೆಗೆ ಸಂಬಂಧಿಸಿ ಇರುವ ಕೆಲವು ತಕರಾರುಗಳ ಬಗ್ಗೆ ರಾಜ್ಯಸಭೆಯ ಚರ್ಚೆಯ ವೇಳೆ ಪರಿಹಾರಗಳನ್ನು ಕಂಡುಕೊಳ್ಳಬಹುದು. ರಸ್ತೆ ಅಪಘಾತಗಳು ಕಡಿಮೆಯಾಗಲಿ; ಜನರ ಪ್ರಾಣಕ್ಕೆ ವೃಥಾ ಅಪಾಯ ಒದಗದಿರಲಿ.

■ ಬಿ.ಎಂ.ಹನೀಫ್

